# ಸುದ್ದಿ ಸಂಚಯ

## ಪರಿಪೂರ್ಣತೆಗಾಗಿ ಶಿಕ್ಷಣ

ಶಿಕ್ಷಕರ ದಿನಾಚರಣೆಯಾದ ಸೆಪ್ಟೆಂಬರ್ ೫ರಂದು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದರ ಶಿಕ್ಷಣದ ವ್ಯಾಖ್ಯೆಗೆ ಸಂಬಂಧಿಸಿದಂತೆ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. 'ಶಿಕ್ಷಣವೆಂದರೆ ಮನುಷ್ಯನಲ್ಲಿ ಈಗಾಗಲೇ ನಿಹಿತವಾಗಿರುವ ಪರಿಪೂರ್ಣತೆಯ ಅಭಿವ್ಯಕ್ತಿ' ಎಂಬುದನ್ನು ಅರ್ಥೈಸುವ ಹಾಗೂ ತರಗತಿಯ ಅವಧಿಯಲ್ಲಿ ಅದನ್ನು ಆಚರಣೆಗೆ ತರುವ ಕುರಿತು ರಾಮಕೃಷ್ಣ ವಿದ್ಯಾಶಾಲೆಯ ಹಾಗೂ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಶಿಕ್ಷಕರು ರಾಮಕೃಷ್ಣ ಆಶ್ರಮದ ಸಾಧುಗಳೂ ಸೇರಿದಂತೆ ಒಟ್ಟು ೩೪ ಉಪನ್ಯಾಸಕರು ತಮ್ಮ ವಿಚಾರಗಳನ್ನು ಮಂಡಿಸಿದರು. ವಿಚಾರ ಸಂಕಿರಣದ ಉದ್ದೇಶ ಸ್ವಾಮಿ ವಿವೇಕಾನಂದರ ಶಿಕ್ಷಣದ ವ್ಯಾಖ್ಯೆಯ ಮೇಲೆ ಹೊಸ ಅರಿವಿನ ಬೆಳಕನ್ನು ಪಡೆಯುವುದಾಗಿತ್ತು. ಅಂದು ಸಂಜೆ ೪.೦೦ಘಂಟೆಗೆ ಆರಂಭವಾಗಿ ಸುಮಾರು ೨ ಗಂಟೆಗಳಿಗೂ ಮೇಲ್ಪಟ್ಟು ನಡೆದ ಈ ವಿಚಾರ ಸಂಕಿರಣಕ್ಕೆ ಆಶ್ರಮದ ಸಭಾಂಗಣವು ಸಾರ್ವಜನಿಕರಿಂದ ತುಂಬಿತ್ತು.

ಸಭಾಸದರನ್ನು ಸ್ವಾಗತಿಸಿದ ಸ್ವಾಮಿ ಆತ್ಮವಿದಾನಂದಜೀಯವರು ವಿಚಾರಸಂಕಿರಣದ ವಿಷಯದ ಮಹತ್ತ್ವವನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಸಂಪೂರ್ಣ ವ್ಯಕ್ತಿತ್ವ ವಿಕಸನ ಸಾಧ್ಯವಾಗಬೇಕಾದರೆ ಅದು ಮೌಲ್ಯಾಧಾರಿತವಾಗಿರಬೇಕು ಎಂದು ಪೂಜ್ಯ ಸ್ವಾಮೀಜಿಯವರು ತಿಳಿಸಿದರು.

ಈ ಮಹತ್ತ್ವದ ವಿಷಯವನ್ನು ವಿವಿಧ ದೃಷ್ಟಿಕೋನಗಳಿಂದ ವಿವೇಚಿಸುವ ಪ್ರಯತ್ನವನ್ನು ಎಲ್ಲ ಉಪನ್ಯಾಸಕರಲ್ಲಿಯೂ ಕಾಣಬಹುದಿತ್ತು. ಸಭಾಸದರು ೨ ಗಂಟೆಗಳಿಗೂ ದೀರ್ಘಕಾಲ ಉತ್ಸಾಹ ಕುತೂಹಲಗಳಿಂದ ಭಾಷಣಕಾರರರು ವ್ಯಕ್ತಪಡಿಸುತ್ತಿದ್ದ ಸ್ವಾಮಿ ವಿವೇಕಾನಂದರ ಶಿಕ್ಷಣದ ಬಗೆಗೆ ಹೊಸ ಹೊಸ ವಿಚಾರಗಳನ್ನು ಎದುರು ನೋಡುತ್ತಿದ್ದರು.

ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದ ಶ್ರೀಮತ್ ಸ್ವಾಮಿ ಸುರೇಶಾನಂದಜೀಯವರು ಕಾರ್ಯಕ್ರಮದ ಬಗೆಗೆ ಪೂರ್ಣ ಸಂತೃಪ್ತಿ ಯನ್ನು ವ್ಯಕ್ತಪಡಿಸಿ ಚರ್ಚೆಗಾಗಿ ಆರಿಸಲ್ಪಟ್ಟ ವಿಷಯದ ಮಹತ್ತ್ವ ವನ್ನು ಮೆಚ್ಚಿಕೊಂಡರು. ತಮ್ಮ ವೃತ್ತಿಗೇ ತಮ್ಮನ್ನು ಸಂಪೂರ್ಣ ವಾಗಿ ಸಮರ್ಪಿಸಿಕೊಂಡ ಶಿಕ್ಷಕವರ್ಗಕ್ಕೆ ನಾವು ಸಲ್ಲಿಸಬಹುದಾದ ಕೃತಜ್ಞತೆಯೆಂದರೆ ಇಂತಹ ವಿಚಾರಸಂಕಿರಣಗಳಲ್ಲಿ ಪಾಲ್ಗೊಂಡು ಶಿಕ್ಷಣದ ಬಗ್ಗೆ ಹೊಸ ಅರಿವನ್ನು ಮೂಡಿಸಿಕೊಳ್ಳುವುದೇ ಆಗಿದೆ ಎಂದು ಅವರು ಅಭಿಪ್ರಾಯಪಟ್ಟರು.



ವ್ಯಕ್ತಿತ್ವ ವಿಕಸನದ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿವೃಂದ

## ವ್ಯಕ್ತಿತ್ವ ವಿಕಸನದ ವಿಶೇಷ ಶಿಬಿರಗಳು

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ನಗರದ ವಿವಿಧ ಪದವೀ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ವ್ಯಕ್ತಿತ್ವ ವಿಕಸನದ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಸೆಪ್ಟೆಂಬರ್ ೧೭ ಮತ್ತು ೨೪ರ ಭಾನುವಾರಗಳಂದು ನಡೆದ ಈ ಶಿಬಿರಗಳಲ್ಲಿ ಕ್ರಮವಾಗಿ ೪೨೭ ವಿದ್ಯಾರ್ಥಿನಿಯರೂ ಹಾಗೂ ೩೨೫ ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ಈ ಶಿಬಿರಗಳ ಕಾರ್ಯಕ್ರಮಗಳು ಬೆಳಿಗ್ಗೆ ೯.೦೦ ಘಂಟೆಗೆ ಆರಂಭಗೊಂಡು ಮಧ್ಯಾಹ್ನ ೧.೩೦ ಗಂಟೆಯವರೆಗೆ ನಡೆದವು.

ಆಶ್ರಮದ ಶ್ರೀರಾಮಕೃಷ್ಣ ಮಂದಿರದಲ್ಲಿ ೪೦ ನಿಮಿಷಗಳ ಪ್ರಾರ್ಥನೆ ಮತ್ತು ಧ್ಯಾನಗಳಿಂದ ಶಿಬಿರದ ಕಾರ್ಯಕ್ರಮಗಳು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜೀಯವರ ಮಾರ್ಗದರ್ಶನದಲ್ಲಿ ಪ್ರಾರಂಭವಾದವು.

ಲಘು ಉಪಾಹಾರದ ನಂತರ ಆಶ್ರಮದ ಸಭಾಂಗಣದಲ್ಲಿ 'ವ್ಯಕ್ತಿತ್ವ ವಿಕಸನ'ಕ್ಕೆ ಸಂಬಂಧಿಸಿದ ದೃಶ್ಯ ಹಾಗೂ ಶ್ರವಣ ಮಾಧ್ಯಮದ (Compact Disc) ಚಿತ್ರ ಪ್ರದರ್ಶನಗಳು ನಡೆದವು.

ವಿವೇಕಪ್ರಭ ಪತ್ರಿಕೆಯ ಸಂಪಾದಕರಾದ ಸ್ವಾಮಿ ನಿತ್ಯಸ್ಥಾನಂದಜೀಯವರಿಂದ ಈ ಎರಡೂ ಶಿಬಿರಗಳಲ್ಲಿ ಉಪನ್ಯಾಸಗಳಿದ್ದವು. ಉಪನ್ಯಾಸಗಳ ನಂತರ ವಿದ್ಯಾರ್ಥಿವರ್ಗಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಪ್ರಶ್ನೋತ್ತರ ಕಾರ್ಯಕ್ರಮಗಳಿದ್ದವು. ಸ್ವಾಮಿ ಆತ್ಮವಿದಾನಂದಜೀಯವರು ಹಾಗೂ ಸ್ವಾಮಿ ನಿತ್ಯಸ್ಥಾನಂದಜೀಯವರು ಈ ಪ್ರಶ್ನೆಗಳಿಗೆ ಉತ್ತರಿಸಿದರು.

ನಾಡಿನ ಯುವಜನತೆ ಎದುರಿಸಬೇಕಾದ ಕೆಲವು ಪ್ರಶ್ನೆಗಳಿಗೆ ವಿದ್ಯಾರ್ಥಿವರ್ಗ ಹೇಗೆ ಪ್ರತಿಸ್ಪಂದಿಸುತ್ತದೆ ಎಂದು ತಿಳಿಯಲು **ಯುವಸ್ಪಂದನ** ಎಂಬ ಕರಪ್ರತಿಗಳನ್ನು ಅವರುಗಳಿಗೆ ಹಂಚಲಾಯಿತು. ಅತ್ಯುತ್ತಮ ಉತ್ತರಗಳು ವಿವೇಕಪ್ರಭ ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟವಾಗುತ್ತವೆ.

ಕಾರ್ಯಕ್ರಮದ ಬಗೆಗೆ ತಮ್ಮ ಆತ್ಮೀಯವಾದ ಭಾವನೆಗಳನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರು ವ್ಯಕ್ತಪಡಿಸಿ ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು.